ಸಾಲ ಮಂಜೂರು ಮಾಡಬೇಕು. ಅದರಲ್ಲಿ ಪಿತ್ರಾರ್ಜಿತ ಆಸ್ತೀನೋ ಸ್ವಯಾರ್ಜಿತ ಆಸ್ತೀನೋ ಅಥವಾ ಸರ್ಕಾರದಿಂದ ಮಂಜೂರಾಗಿದೆಯೋ ಎಲ್ಲಾ ಮಾಹಿತಿ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಮಹಾರಾಷ್ಟ್ರದಲ್ಲಿ ಯಾವ ರೀತಿ ಪಟ್ಟಾ ಪಾಸ್ ಬುಕ್ ಮಾಡಿದ್ದಾರೋ ಅದೇ ಆಧಾರದ ಮೇಲೆ ನಾವು ಮಾಡಿದ್ದೇವೆ. ಇಲ್ಲಿರತಕ್ಕ ಅನೇಕ ಪ್ರಮುಖರು ಇದರಲ್ಲಿ ಆಸಕ್ತಿ ವಹಿಸುವ ಜನ ಏನಿದ್ದಾರೆ ಅವರ ಸಲಹೆ ಪ್ರಕಾರ ಸುಮಾರು ೨೦–೨೫ ಮಾಹಿತಿಗಳನ್ನು ಇದರಲ್ಲಿ ಕೊಟ್ಟಿದೆ. ಬ್ಯಾಂಕ ನವರಾಗಲೀ ಆಫೀಸಿನವರಾಗಲೀ ಇದಕ್ಕೆ ಮಾನ್ಯತೆ ಕೊಡತಕ್ಕ ಮಾಹಿತಿಗಳಿವೆ.

ಶ್ರೀ ಬಿ ಎಸ್. ಯಡಿಯೂರಪ್ಪ :– ಈಗಾಗಲೇ ಪಾಸ್ ಬುಕ್ ಪ್ರಿಂಟ್‌ಗೆ ಹೋಗಿ ವಾಪಸ್ ಬಂದಿಲ್ಲದೆ ಇದ್ದರೆ ಪ್ರೊಫೆಸರ್ ನಂಜುಂಡಸ್ವಾಮಿ ಅವರು ಹೇಳಿದ ಹಾಗೆ ಜಾತಿ ಅದರಲ್ಲಿ ನಮೂದಿಸಿದರೆ ಜಾತಿ ಸರ್ಟಿಫಿಕೇಟ್‌ಗೆ ಅಲೆಯುವುದು ತಪ್ಪುತ್ತದೆ. ಖುಷ್ಕಿ ಎಷ್ಟು, ತರಿ ಎಷ್ಟು ಎಂಬ ಡಿಟೇಲ್ಸ್ ಇದ್ದಾಗ ಒಂದು ಸೊಸೈಟಿಯಲ್ಲಿ ಸಾಲ ತೆಗೆದುಕೊಂಡು ಮತ್ತೊಂದು ಕಡೆ ಹೋದಾಗ ಅವನ ಎಲಿಜಿಬಿಲಿಟಿ ಏನು ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದಕ್ಕೆ ಸ್ವಲ್ಪ ಹಣ ವೇಸ್ಟ್ ಆಗುತ್ತದೆ. ಆದರೂ ಅದನ್ನು ಮಾಡಿದರೆ ಜಾತಿ ಸರ್ಟಿಫಿಕೇಟ್‌ಗೆ ಅಲೆಯುವದು ತಪ್ಪುತ್ತದೆ. ಆದ್ದರಿಂದ ಅದರ ಬಗ್ಗೆ ಯೋಚನೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ನಾವು ಬಹಳ ಕಷ್ಟಪಟ್ಟು ೫ ಕೋಟಿ ರೂಪಾಯಿ ಎಕ್ಸಪೆಂಡಿಚರ್ ಬರುತ್ತದೆಂದು ಫೈನಾನ್ಸ ಡಿಪಾರ್ಟಮೆಂಟಿನವರ ಜೊತೆ ಕಷ್ಟಪಟ್ಟು ಗುದ್ದಾಡಿ ಎರಡು ಕೋಟಿ ರೂಪಾಯಿ ತೆಗೆದುಕೊಂಡಿದ್ದೇವೆ. ಈಗಾಗಲೇ ಲಂಪಸರ್ಮೆಂಟ ಪ್ರಿಂಟ್ ಆಗಿದೆ. ಬೇಕಾದರೆ ಮುಂದೆ ನೋಡೋಣ ಇದನ್ನು ಎಕ್ಸಪರಿಮೆಂಟ್ ಮಾಡಿ ಇನ್ನೂ ಮಾಹಿತಿಬೇಕು ಅನ್ನಿಸಿದರೆ ಅಡಿಷನಲ್ಲಾಗಿ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಪ್ರಶ್ನೆ ಸಂಖ್ಯೆ ೧೦೩೭ ಕ್ಕೆ ಡೆಪ್ಯುಟಿ ಕಮಿಷನರ್ ಅವರಿಂದ ಮಾಹಿತಿ ಬಂದಿಲ್ಲ ಅವರಿಗೆ ಪತ್ರ ಬರೆದಿದ್ದೇವೆ.

ಅಧ್ಯಕ್ಷರು :– ಇದಕ್ಕೆ ಟೈಂ ಬೇಕು; ತಡೆ ಹಿಡಿಯಲಾಗಿದೆ.

ವಿಷಯ : ಶಿವಮೊಗ್ಗ ಜಿಲ್ಲೆಯಲ್ಲಿ ಬರಗಾಲ ಕಾಮಗಿರಿ ಮತ್ತು ಅತಿವೃಷ್ಟಿ ಕಾಮಗಾರಿಗಳು.

ಚುಕ್ಕೆ ಗುರುತಿನ ಪ್ರಶ್ನೆ ೨೫೭ (೧೦೭೦)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಬರಗಾಲ ಕಾಮಗಾರಿ ಮತ್ತು ಅತಿವೃಷ್ಟಿ ಪರಿಹಾರ ಕಾಮಗಾರಿಗಾಗಿ ಈ ವರೆಗೆ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು ?

ಆ) ಈ ಹಣವನ್ನು ಜಿಲ್ಲಾಧಿಕಾರಿಗಳು ಯಾವ ಯಾವ ತಾಲೂಕಿಗೆ ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ ?

ಇ) ಸಂಬಂಧಪಟ್ಟ ತಾಲ್ಲೂಕ ಅಧಿಕಾರಿಗಳು ಈ ವರೆಗೆ ಎಷ್ಟು ಹಣ ಖರ್ಚು ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :-

ಅ) ೧) ಬರಗಾಲ ಕಾಮಗಾರಿಗೆ – ೪೮.೦೦ ಲಕ್ಷ ರೂ.

೨) ಅತಿವೃಷ್ಟಿ ಪರಿಹಾರ ಕಾಮಗಾರಿಗಳಿಗೆ – ೮.೦೦ ಲಕ್ಷ ರೂ.

ಆ)

(ಲಕ್ಷ ರೂ.ಗಳಲ್ಲಿ)

| ತಾಲ್ಲೂಕಿನ ಹೆಸರು | ಬರಗಾಲ ಕಾಮಗಾರಿಗೆ | ಅತೀವೃಷ್ಟಿ ಪರಿಹಾರ ಕಾಮಗಾರಿಗೆ |
|---|---|---|
| ೧) ಚನ್ನಗಿರಿ | ೬.೭೫ | – |
| ೨) ಹೊನ್ನಾಳಿ | ೧೨.೫೦ | – |
| ೩) ಶಿಕಾರಿಪುರ | ೧೦.೫೦ | – |
| ೪) ಸೊರಬ | ೬.೭೫ | ೧.೦೦ |
| ೫) ಸಾಗರ | – | ೧.೫೦ |
| ೬) ತೀರ್ಥಹಳ್ಳಿ | – | ೧.೦೦ |
| ೭) ಹೊಸನಗರ | – | ೧.೫೦ |
| ಒಟ್ಟು : | ೩೬.೫೦ | ೫.೦೦ |

ಇ) ರೂ. ೮೯.೧೧ ಲಕ್ಷಗಳು

ಶ್ರೀ ಬಿ. ಎಸ್. ಯಡಿಯೂರಪ್ಪ :- ಸನ್ಮಾನ್ಯ ಅಧ್ಯಕ್ಷರೆ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ೫ ಹೋಬಳಿಗಳ ಪೈಕಿ ೪ ಹೋಬಳಿಯಲ್ಲಿ ಪೂರ್ಣ ಬರಗಾಲ ಇದೆ. ರೆವಿನ್ಯೂ ಅಧಿಕಾರಿಗಳು ಮತ್ತು ಕೃಷಿ ಅಧಿಕಾರಿಗಳು ವರದಿ ಕಳುಹಿಸಿದ್ದಾರೆ. ೧೦ ಸಾವಿರ ಜನ ಕೃಷಿ ಕಾರ್ಮಿಕರಿಗೆ ಉದ್ಯೋಗ ಕೊಡ ಬೇಕಾಗಿದೆ. ಹರಿಜನ ಗಿರಿಜನರ ಸಂಖ್ಯೆ ಅಲ್ಲಿ ಜಾಸ್ತಿ ಇದೆ. ಈಗ ಅವರಿಗೆ ಕೆಲಸ

ಇಲ್ಲಪೆ ಕೆಲಸ ನಿಂತಿದೆ. ದಿವಸಕ್ಕೆ ೫೦೦ ರಿಂದ ೧೦೦೦ ಜನರಿಗೆ ಕೆಲಸ ಕೊಡುತ್ತಿದ್ದಾರೆ. ಆದ್ದರಿಂದ ರೆವಿನ್ಯೂ ಕಮಿಷನರ್ ಅವರನ್ನು ಕಳುಹಿಸಿ ತನಿಖೆ ಮಾಡಿ ವರದಿ ತರಿಸಬೇಕು. ೧೦ ಸಾವಿರ ಜನರಿಗೆ ಅಲ್ಲಿ ಉದ್ಯೋಗ ಕೊಡಬೇಕಾಗುತ್ತದೆ. ೧೦ ಸಾವಿರ ಜನರಿಗೆ ಉದ್ಯೋಗ ಕೊಡುವುದಕ್ಕೆ ಬೇಕಾದ ಹಣ ಬಿಡುಗಡೆ ಮಾಡುತ್ತೀರಾ ? ಸಂಬಂಧಪಟ್ಟ ಅಧಿಕಾರಿಗಳಿಂದ ವರದಿ ತರಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ತಾಲ್ಲೂಕುವೈಸ್ ಹಣ ಖರ್ಚು ಮಾಡಿರುವುದೆಷ್ಟು ಎಂದು ಕೇಳಿದ್ದಾರೆ. ಶಿಕಾರಿಪುರಕ್ಕೆ ಹೆಚ್ಚಿನ ಹಣ ಕೊಟ್ಟಿದ್ದೇವೆ. ೧೦ ಸಾವಿರ ಜನ ಕೆಲಸ ಮಾಡುವುದಕ್ಕೆ ರಿಲೀಫ್ ವರ್ಕ್ಸ್‌ಗೆ ಬರುತ್ತದೆಂದು ಹೇಳಿದ್ದಾರೆ. ಡೆಪ್ಯೂಟಿ ಕಮಿಷನರ್ ಅವರಿಂದ ವರದಿ ತರಿಸಿಕೊಂಡು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದು ಮತ್ತು ಎಷ್ಟು ಖರ್ಚಾಗಿದೆ ಎಂಬುದನ್ನು ಕೊಟ್ಟಿದ್ದಾರೆ. ನಾವು ಈ ಬರಗಾಲದ ಬಗ್ಗೆ ಜಿಲ್ಲಾಧಿಕಾರಿಗಳ ಜೊತೆ ಚರ್ಚೆ ಮಾಡಿದಾಗ ಅವರ ಕೂಡ ಬಂದು ಸ್ಥಳ ಪರಿಶೀಲನೆ ಮಾಡಿದ್ದಾರೆ. ಅಲ್ಲಿ ದೊಡ್ಡ ಸಮಸ್ಯೆ ಇದೆ. ಇಲ್ಲಿ ದುಡ್ಡು ಖರ್ಚು ಆಗಿರುವುದು ಮುಖ್ಯ ಅಲ್ಲ. ಅಲ್ಲಿ ಇರುವ ಎಲ್ಲಾ ಕೃಷಿ ಕಾರ್ಮಿಕರಿಗೂ ಉದ್ಯೋಗ ಒದಗಿಸಿ ಕೊಡುವ ಬಗ್ಗೆ ಆದಷ್ಟು ಬೇಗ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಎಷ್ಟು ಜನ ಅಲ್ಲಿ ಕೆಲಸಕ್ಕೆ ಬರುತ್ತಾರೆ ಎಷ್ಟು ಹಣದ ಅವಶ್ಯಕತೆ ಇದೆ ಎಂದು ಜಿಲ್ಲಾಧಿಕಾರಿಗಳ ವರದಿ ಬಂದ ತಕ್ಷಣ ನಾವು ಖಂಡಿತವಾಗಿ ಮುಂದಿನ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ : ರಾಜ್ಯದಲ್ಲಿ ಕಲಾವಿದರುಗಳಿಗೆ ಮಾಸಾಶನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೬೦ (೧೦ಳಳ)

ಶ್ರೀ ಜಿ. ಎಸ್. ಆಚಾರ್ (ಬೈಂದೂರು) :

ಶ್ರೀ ಎಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಳೆದ ಕೆಲವು ವರ್ಷಗಳಿಂದ ಅಶಕ್ತ ಕಲಾವಿದರಿಗೆ ಮಾಸಾಶನ ಮಂಜೂರು ಮಾಡುವುದನ್ನು ನಿಲ್ಲಿಸಿದ್ದು, ಅದರಿಂದ ಕಲಾವಿದರಿಗೆ ಆಗಿರುವ ತೊಂದರೆಯನ್ನು ಸರ್ಕಾರ ಗಮನಿಸಿದೆಯೇ ?

ಆ) ಮುಂದೆ ಮಂಜೂರು ಮಾಡಲು ಸರಕಾರದ ಯೋಜನೆ ಏನು ?